1	2	3	4	5	6	7	8
22.	ಚಾಮರಾಜ ನಗರ	675	7.30	13.62	52.21	46.04	119.17
23.	ಉಡುಪಿ	672	8.94	25.26	47.09	72.99	154.28
24.	ಹಾವೇರಿ	863	8.69	20.20	49.77	87.39	166.05
25.	ಗದಗ್	273	4.15	6.60	22.51	46.53	79.79
26.	ಬಾಗಲಕೋಟೆ	407	5.40	10.89	36.86	28.88	82.03
27.	ಕೊಪ್ಪಳ	221	6.50	5.85	14.75	23.03	50.13
	ಒಟ್ಟು	16406	266.69	462.35	1224.03	1658.32	3611.39

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2027ಕ್ಕೆ

ಅನುಬಂಧ - 3

ವಿಧಾನ ಸಭಾ ಕ್ಷೇತ್ರದ	2001-2002		2002-2003	
ಹೆಸರು	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
ಉಡುಪಿ	118	17.24	68	10.10
ಬ್ರಹ್ಮವರ	312	17.40	110	14.58
ಕಾಪು	471	29.47	106	10.11
ಕುಂದಾಪುರ	150	29.93	212	25.14
ಬೈಂದೂರು	92	8.85	148	18.56
ಕಾರ್ಕಳ	65	6.32	28	2.80
ಒಟ್ಟು	12.08	100.21	672	81.29

ದಿನಾಂಕ 28-2-2003 ರವರೆಗೆ ಈ ಜಿಲ್ಲೆಯ ಎಲ್ಲಾ ಯೋಜನೆಗಳಿಗೆ ಒಟ್ಟು 181.50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ರಾಜ್ಯದಲ್ಲಿ ನಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳು

1610 (2029) ಶ್ರೀ ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೊಂದಾವಣೆಗೊಂಡ ಸಣ್ಣ ಕೈಗಾರಿಕೆಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಇವುಗಳಲ್ಲಿ 28-2-2003 ರವರೆಗೆ ನಷ್ಟದಲ್ಲಿದ್ದು ಮುಚ್ಚಲ್ಪಟ್ಟಿರುವ ಸಣ್ಣ ಕೈಗಾರಿಕೆಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) 28-2-2003ರವರೆಗೆ ನಷ್ಟದಲ್ಲಿದ್ದು ಇನ್ನೂ ಕಾರ್ಯನಿರ್ವಹಿಸುತ್ತಿರುವ ಸಣ್ಣ ಕೈಗಾರಿಕೆಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಈ) ನಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ದಿನಾಂಕ 31-1-2003 ರಲ್ಲಿದ್ದಂತೆ ಇರುವ ಸಣ್ಣ ಕೈಗಾರಿಕೆಗಳು 2,94,620. (ಜಿಲ್ಲಾವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ)

ಆ) ಏಪ್ರಿಲ್ 2001ರಂದು ಭಾರತ ಸರ್ಕಾರದವರು ನಡೆಸಿದ ಸಣ್ಣ ಕೈಗಾರಿಕೆಗಳ ಸಮೀಕ್ಷಾ ವರದಿ ಪ್ರಕಾರ ಸಮೀಕ್ಷೆ ನಡೆಸಿದ ಘಟಕಗಳ ಪೈಕಿ ಶೇ. 50ರಷ್ಟು ಮಾತ್ರ ಕಾರ್ಯ ನಿರ್ವಹಿಸುತ್ತಿರುವುದಾಗಿ ವರದಿಯಾಗಿದೆ. ಉಳಿದ ಶೇ. 50ರಷ್ಟು ಘಟಕಗಳು ರೋಗಗ್ರಸ್ಥವಾಗಿರುವುದಾಗಿಯೂ, ರೋಗಗ್ರಸ್ತ ಹಾದಿಯಲ್ಲಿರುವುದಾಗಿಯೂ ಅಥವಾ ಮುಚ್ಚಿರುವುದಾಗಿಯೂ ವರದಿಯಾಗಿದೆ. ರಾಜ್ಯದ ಸಣ್ಣ ಕೈಗಾರಿಕೆಗಳ ಪೂರ್ಣ ಸ್ಥಿತಿ ಗತಿಗಳನ್ನು ತಿಳಿಯಲು ಸಣ್ಣ ಕೈಗಾರಿಕೆಗಳ ಗಣತಿ ಕಾರ್ಯವನ್ನು ಸರ್ಕಾರ ಪ್ರಾರಂಭಿಸಿದ್ದು ಇದು ಪ್ರಗತಿಯಲ್ಲಿದೆ. ಇದು ಪೂರ್ಣಗೊಂಡ ನಂತರ ಈ ಬಗ್ಗೆ ನಿಖರವಾದ ಅಂಕಿಅಂಶಗಳು ಲಭ್ಯವಾಗುತ್ತದೆ.

ಅ) ಮೇಲಿನಂತೆ

ಇ) ಮುಚ್ಚಿರುವ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ರೂಪಿಸಿರುವುದಿಲ್ಲ. ಆದರೆ ರೋಗಗ್ರಸ್ಥ ಕೈಗಾರಿಕೆಗಳ ಪುನಃಶ್ಚೇತನಕ್ಕಾಗಿ ಪ್ರತ್ಯೇಕ ನೀತಿಯನ್ನು ಪ್ರಕಟಿಸಲಾಗಿದೆ. ಅದರಂತೆ ಪುನಃಶ್ಚೇತನಗೊಂಡ ರೋಗಗ್ರಸ್ಥ ಕೈಗಾರಿಕೆಗಳಿಗೆ ಈ ಕೆಳಕಂಡ ರಿಯಾಯಿತಿ ಮತ್ತು ಸವಲತ್ತುಗಳನ್ನು ನೀಡಲಾಗುತ್ತಿದೆ;

1. ಘಟಕದ ಪುನಃಶ್ಚೇತನ ಯೋಜನಾ ವೆಚ್ಚದ ಶೇ. 25 ರಷ್ಟು ಹಣವನ್ನು ರೂ. 2.50 ಲಕ್ಷಗಳ ಮಿತಿಗೊಳಪಟ್ಟು ಬಡ್ಡಿ ರಹಿತ ಬೀಜಧನ ಸಾಲದ ರೂಪದಲ್ಲಿ ನೀಡಲಾಗುತ್ತದೆ;

2. ಕೆ.ಪಿ.ಟಿ.ಸಿ.ಎಲ್. ಹಾಗೂ ಇತರ ಪ್ರಾಂತೀಯ ವಿದ್ಯುತ್ ಸರಬರಾಜು ಕಂಪನಿಗಳು ಘಟಕವು ಮುಚ್ಚಿದ ಅವಧಿಯಲ್ಲಿ ನಿಗದಿತ ದರ ಹಾಗೂ ಬೇಡಿಕೆ ದರ ಪಾವತಿಯಿಂದ ವಿನಾಯಿತಿ ನೀಡುವುದು.

3. ವಿದ್ಯುತ್ ಬಾಕಿ ದರಗಳನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ. 6ರ ಬಡ್ಡಿ ದರದಲ್ಲಿ ಪಾವತಿಸಲು ಅವಕಾಶ;

4. ಘಟಕವು ಮುಚ್ಚಿದ ಅವಧಿಗೆ ಬಡ್ಡಿ ಪಾವತಿಯಿಂದ ವಿನಾಯಿತಿ;

5. ಕೆಐಎಡಿಬಿ/ಕೆಎಸ್ಎಸ್ಐಡಿಸಿ/ಕಿಯೋನಿಕ್ಸ್‌ಗಳ ಬಾಕಿ ಸಾಲ ಪಾವತಿಯನ್ನು ಒಂದು ವರ್ಷದವರೆಗೆ ಮುಂದೂಡಿ ಅದನ್ನು ನಾಲ್ಕು ವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ;

6. ಅಭಿವೃದ್ಧಿ ಸಾಲ ಮರು ಪಾವತಿಯನ್ನು ಕೈಗಾರಿಕೆಯು ಪುನಃಶ್ಚೇತನಗೊಳಿಸಿದ ನಂತರ ಮೂರು ವರ್ಷದ ಅವಧಿಯಲ್ಲಿ ಬಡ್ಡಿ ಇಲ್ಲದೆ ಪಾವತಿಸಲು ಅವಕಾಶ.

7. ವಾಣಿಜ್ಯ ತೆರಿಗೆ ಬಾಕಿಯನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ. 6ರ ಬಡ್ಡಿ ದರದಲ್ಲಿ ಮರು ಪಾವತಿಸಲು ಅವಕಾಶ.

8. ಘಟಕವು ಪುನಃಶ್ಚೇತವಗೊಂಡ ನಂತರ ಮುಂದೆ ಪಾವತಿಸಬೇಕಾದ ವಾಣಿಜ್ಯ ತೆರಿಗೆಯನ್ನು ಬಡ್ಡಿ ಇಲ್ಲದೇ ಮೂರು ವರ್ಷಗಳವರೆಗೆ ಮುಂದೂಡಲು ಅವಕಾಶ. ಹಾಗೂ ಈ ಮೊತ್ತವನ್ನು ಮೂರು ವಾರ್ಷಿಕ ಕಂತುಗಳಲ್ಲಿ ಪ್ರಸ್ತುತ ತೆರಿಗೆಯೊಡನೆ ಪಾವತಿಸಬೇಕಾಗುತ್ತದೆ.

Annexure to LA No 2029

Registration of Small Scale Industries in Karnataka as on 31-1-2003

Sl. No.	District	No. of Units
1.	Bangalore (U)	53453
2.	Belgaum	26976
3.	Bellary	11276
4.	Bijapur	5418
5.	Bidar	6740
6.	Chickmagalur	5110
7.	Chitradurga	6800
8.	Kodagu	2994
9.	Dharwad	11475
10.	Gulburga	10806
11.	Hassan	8092
12.	Uttara Kannada	6406
13.	Dakshina Kannada	13910
14.	Kolar	11093
15.	Mandhya	6943
16.	Mysore	18028
17.	Raichur	7044
18.	Shimoga	11043
19.	Tumkur	17516
20.	Bangalore (R)	13547
21.	Bagalkote	5317
22.	Chamarajanagar	6716
23.	Davangere	5998
24.	Gadag	5908
25.	Haveri	6823
26.	Koppal	3402
27.	Udupi	5786
	Total	**294620**

ನಬಾರ್ಡ್ ಮೀನುಗಾರಿಕಾ ರಸ್ತೆಗಳಿಗೆ ಮಂಜೂರಾತಿ ಆದ ಕಾಮಗಾರಿಗಳು

1611 (2030) ಶ್ರೀ ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?